CC-O. In Public Domain. Digitized by eGangotri

ಮತದಾನ

ನಾಗಚಂದ್ರ



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮತದಾನ

ನಾಗಚಂದ್ರ

ಕರ್ನಾಟಕ ರಾಜ್ಯ ಪಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

ಮೊದಲನೆ ಮುದ್ರಣ : ೧೯೮೦
CC-O. In Public Domain. Digitized by eGangotri
ಎರಡನೆ ಮುದ್ರಣ : ೧೯೮೪

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ
ಮೈಸೂರು-೫೭೦೦೦೨ ಪ್ರತಿಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲ ಮಾತು

ನವಸಾಕ್ಷರರ ಸಾಹಿತ್ಯ ರಚನೆ ಅಷ್ಟೇನು ಸುಲಭಸಾಧ್ಯವಾದ ಕಾರ್ಯವಲ್ಲ. ಹಾಗೂ ಅಂತಹ ಸಾಹಿತ್ಯವನ್ನು ಎಲ್ಲರೂ ರಚಿಸಲಾರರು. ಕಾರಣ ನವಸಾಕ್ಷರರ ಸಾಹಿತ್ಯ ರಚನೆ ಒಂದು ಶಾಸ್ತ್ರ. ಅದನ್ನು ಕರಗತ ಮಾಡಿಕೊಳ್ಳಲು ವಯಸ್ಕರ ವಾಚನಾಭಿರುಚಿ, ಭಾಷೆ, ನಿರೂಪಣೆ ಮುಂತಾದ ವಿಷಯಗಳ ಬಗ್ಗೆ ಸಾಕಷ್ಟು ಆಳವಾದ ಅಧ್ಯಯನ ಮತ್ತು ಅಭ್ಯಾಸ ಅನಿವಾರ್ಯ.

ಹಾಸನ ವಿದ್ಯಾಪೀಠದಲ್ಲಿ ಬರಹಗಾರರ ಸಾಹಿತ್ಯ ರಚನಾಲಯ ನಡೆಯಿತು. ಈ ರಚನಾಲಯದಲ್ಲಿ ಶ್ರೀಯುತರಾದ ನಾಗಚಂದ್ರ ಅವರು ಭಾಗವಹಿಸಿ "ಮತದಾನ" ಎಂಬ ಹಸ್ತಪ್ರತಿಯನ್ನು ರಚಿಸಿಕೊಟ್ಟಿದ್ದಾರೆ. ಹಸ್ತಪ್ರತಿಯ ತಾಂತ್ರಿಕ ವಿಷಯದ ಬಗ್ಗೆ ಪ್ರೊಫೆಸರ್ ಸಿ. ಕೆ. ರಾಜ ಅವರು ಪರಿಶೀಲಿಸಿದ್ದಾರೆ ಮತ್ತು ಪ್ರೊಫೆಸರ್ ಆನಂತ ರಾಮು ಭಾಷೆಯ ಬಗ್ಗೆ ಪರಿಶೀಲಿಸಿದ್ದಾರೆ. ಪಠ್ಯಪುಸ್ತಕ ರಚನಾ ವಿಭಾಗದ ಶ್ರೀ ಟಿ. ಆರ್. ನಾಗಪ್ಪನವರು ನಿರ್ದೇಶನಾಲಯವನ್ನು ನಡೆಸಿಕೊಟ್ಟಿದ್ದಾರೆ. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಈ ಹಸ್ತಪ್ರತಿಯನ್ನು ಪ್ರಕಟಿಸಿ ವಾಚಕವೃಂದಕ್ಕೆ ಉಪಕಾರ ಮಾಡಿದೆ. ಇವರೆಲ್ಲರಿಗೂ ರಾಜ್ಯ ಸಂಪನ್ಮೂಲ ಕೇಂದ್ರದ ವತಿಯಿಂದ ಕೃತಜ್ಞತಾಪೂರ್ವಕವಾದ ಧನ್ಯವಾದಗಳು.

ಬೇ. ರಾ. ಪ್ರಭಾಕರ
ನಿರ್ದೇಶಕರು, ರಾಜ್ಯ ಸಂಪನ್ಮೂಲ ಕೇಂದ್ರ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮತದಾನ

ಬೇಗೂರು ಒಂದು ಸಣ್ಣ ಗ್ರಾಮ. ಹತ್ತಾರು ಮಂಗಳೂರು ಹೆಂಚಿನ ಮನೆಗಳು. ಅವೆಲ್ಲ ಗ್ರಾಮದ ಸಾಹುಕಾರರದು. ಉಳಿದ ಮನೆಗಳಲ್ಲಿ ಕೆಲವು ನಾಡು ಹೆಂಚಿನ ಮನೆಗಳು. ಇನ್ನು ಕೆಲವು ಗುಡಿಸಲುಗಳು. ಅವುಗಳಿಗೆ ತೆಂಗಿನ ಸೋಗೆಯಿಂದ ಅಥವಾ ನೆಲ್ಲುಹುಲ್ಲಿನಿಂದ ಹೊದಿಸಿದ ಮಾಡುಗಳು. ಇಂಥ ಗ್ರಾಮದಲ್ಲಿ ಬೀರ ವಾಸಿಸುತ್ತಿದ್ದ.

ಬೀರ ಓದು-ಬರಹ ಕಲಿಯಲೇ ಇಲ್ಲ. ಕಾರಣ ಅವನು ಚಿಕ್ಕವನಾಗಿ ಇದ್ದಾಗಲೇ ಅವನ ತಂದೆ-ತಾಯಿ ತೀರಿಕೊಂಡರು. ಗ್ರಾಮಕ್ಕೆ ಅಂಟಿಬಂದ ಕಾಲರ ರೋಗಕ್ಕೆ ಅವರು ಬಲಿ ಆದರು. ಮುಂದೆ ಬೀರ ಅನಾಥನಾದ. ಅಜ್ಜ-ಅಜ್ಜಿಯರು ಅವನನ್ನು ಸಾಕಿದರು. ಅವರಿಗೆ ಯಾರಿಗೂ ಬೀರನನ್ನು ಓದಿಸಬೇಕು ಎಂದು ಹೊಳೆಯಲೇ ಇಲ್ಲ. ಹೀಗಾಗಿ ಬೀರ ಕುರಿ ಮೇಯಿಸಿದ. ದನ ಕಾದ. ಹೊಲದಲ್ಲಿ ದುಡಿಯುವುದನ್ನು ಕಲಿತ.

ಹಗಲು ರಾತ್ರಿ ಆಗುತ್ತದೆ. ರಾತ್ರಿ ಹಗಲು ಆಗುತ್ತದೆ. ದಿನಗಳು ಯಾವಾಗಲೂ ಹಿಂದೆ ಸರಿಯುವುದಿಲ್ಲ. ಮುಂದೆ ಮುಂದೆ ಓಡುತ್ತವೆ. ಹೀಗಾಗಿ ಬೀರ ಬೆಳೆದು ದೊಡ್ಡವನು ಆದ. ಆಸುಪಾಸಿನ ಜನ ಅವನಿಗೆ ಹೆಣ್ಣು ಕೊಡಲು ಓಡಾಡಿದರು. ಕಡೆಗೆ ಬೀರ ರಾಮಿಗೆ ಒಲಿದ. ರಾಮಿಗೆ ವಯಸ್ಸಿಗೆ ತಕ್ಕ ಹಾಗೆ ಚೆಲುವು ಇತ್ತು. ಅದು ಬೀರನ ಮನ ಒಲಿಸಿತು.

ಬೀರ ರಾಮಿ ಗಂಡ ಹೆಂಡಿರಾಗಿ ಅವರ ಗುಡಿಸಲು ಸೇರಿದರು. ಬೀರನಿಗೆ ತನ್ನ ಗುಡಿಸಲ ಮೇಲೆ ಅಪಾರ ಪ್ರೀತಿ. ಆಗಾಗ ಅವನು ಹೇಳುತ್ತಾನೆ;

Sri Vidyabharathi Book Centre, Sringeri

CC-O. In Public Domain. Digitized by eGangotri

'ರಾಮಿ, ಈ ಗುಡ್ಲು ನೋಡು, ಏಟು ಚಂದಾಗದೆ ಅಲ್ವ ?'

ಬೀರನ ಎದೆಗೆ ಒರಗಿದ ರಾಮಿ ಕನಸುಕಾಣುತ್ತ 'ಹೂಂ' ಗುಟ್ಟುವಳು. ಅವಳಿಗೆ ಬೇರೆಯವರಂತೆ ತಾನೂ ಹೆಂಚಿನ ಮನೆಯಲ್ಲಿ ವಾಸಿಸುವ ಆಸೆ. ಇತರ ಹೆಂಗಸರಂತೆ ರೇಷಿಮೆಯ ಸೀರೆ ಉಟ್ಟು ನಲಿಯಬೇಕು ಎಂಬ ಬಯಕೆ.

'ಏನಮ್ಮಿ, ಏನು ಕನಸು ಕಾಣುತಾ ಇದ್ದೆಯಾ'—ಎಂದ ಬೀರ.

'ಯಾನು ಇಲ್ಲ' ರಾಮಿ ಅಂದಳು.

'ಮುಸ್ಸಂಜೆ ಆಯತಾ ಬತ್ತು. ಹೋಗಿ ಹಿಟ್ಟು ಮಡಗಮ್ಮಿ.'

'ಹೂಂ'

ಎನ್ನುತ್ತ ರಾಮಿ ಎದ್ದು ಒಲೆ ಹೊತ್ತಿಸಿದಳು. ಮಡಕೆಯಲ್ಲಿ ನೀರು ಇಟ್ಟಳು. ಬೀರ ಹೊರಗೆ ಬಂದು ಕುಳಿತ. ಸಂಜೆ ಆದುದರಿಂದ ಹಕ್ಕಿಗಳು ಮರಳಿ ಗೂಡು ಸೇರಲು ಆರಂಭಿಸಿದುವು. ಹಕ್ಕಿಗಳು ಜೊತೆ ಜೊತೆಯಾಗಿ ಹಾರಾಡುವುದನ್ನು ಕಂಡ ಬೀರ.

'ಈ ಹಕ್ಕಿಗಳು ಹೆಂಗೆ ಸ್ವತಂತ್ರವಾಗಿ ಆರಾಡುತ್ತವೆ. ಏಟು ಸಂತೋಷವಾಗಿ ಇವೆ. ಅವುಗಳಿಗೆ ಯಾರ ಕಟ್ಟುಪಾಡೂ ಇಲ್ಲ'—ಎನಿಸಿತು.

'ಬೀರ, ಏ ಬೀರ'

ಬೀರ ಮಾತನಾಡಲಿಲ್ಲ. ಅವನ ಗಮನವೆಲ್ಲ ಹಕ್ಕಿಗಳ ಕಡೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಏ, ಬೀರ, ಏನು ನೋಡ್ತಾ ಇದ್ದೀಯಾ'—ಗೌಡರು ಜೋರಾಗಿ ಹೇಳಿದರು. ಬೀರ ಗಾಬರಿಯಾಗಿ ಮಿಕ ಮಿಕ ಕಣ್ಣು ಬಿಟ್ಟ.

'ಕೈಮುಗ್ದೆ' ಎಂದ. ಗೌಡರು ಒಬ್ಬರೇ ಬಂದಿರಲಿಲ್ಲ. ಗೌಡರ ಜತೆಯಲ್ಲಿ ಪಟೇಲ ಶಿವಣ್ಣ, ದೊಂದೆ ಬೋರಪ್ಪ, ಯಜಮಾನ ವೆಂಕಟಪ್ಪ ಮುಂತಾಗಿ ಏಳೆಂಟು ಜನ ಬಂದಿದ್ದರು ಬೀರನಿಗೆ ಒಂದು ಬಗೆಯ ಕುತೂಹಲ.



ಬೀರನ ಮನೆ, ಗೌಡರು ಸಂಗಡಿಗರೊಡನೆ ಓಟು ಕೇಳಲು ಬಂದಿರುವುದು

'ತನ್ನ ಗುಡಿಸ್ಲು ತಾಕೆ ಇವರೆಲ್ಲ ಬರಾಕೆ ಕಾರಣ ಏನು?'—ಅಂತ. ಗೌಡರೇ ಬಾಯಿಬಿಟ್ಟರು.

'ಬೀರ ಈಗ ನಾನು ಯಾಕೆ ಬಂದಿವ್ನಿ ಗೊತ್ತದ?'

'ಇಲ್ಲ' ಬೀರ ತಲೆ ಆಡಿಸಿದ.

ಮುಂದಿನವಾರ ಪಂಚಾಯತಿ ಎಲೆಕ್ಸನ್ ಅದೆ. ನಮಗೆ ನೀನು ಓಟು ಕೊಡಬೇಕು. ಮರಿಬ್ಯಾಡ. ನಾ ನಿನ್ನು ಬರಲಾ. ಆಂ.....ಅಂದಂಗೆ ನಿನ್ನ ಎಡ್ತಿಗೂ ಹೇಳು. ನಮಗೇ ಓಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಕಬೇಕು ಅಂತ. ನಡೀರಿ'--ಎಂದು ಗೌಡರು ತನ್ನ ಕಡೆಯ ವರನ್ನು ಹೊರಡಿಸಿಕೊಂಡು ಹೋದರು.

'ಓಟು ಕೇಳಾಕೆ ಮಾತ್ರ ಇವರೆಲ್ಲ ನಮ್ಮ ತಾಕೆ ಬತ್ತಾರೆ. ಬೇರೆ ದಿನ ಸತ್ತಿದೀಯ ಬದುಕಿದೀಯ ಅಂತ ಇಚಾರಿಸೋಕು ಬರಾಕಿಲ್ಲ. ಓಟು ಆಕೋವಾಗ ಆದರೂ ನಾವು ದೊಡ್ಡವರು ಆಯ್ತೀವಿ'—ಎಂದು ಬೀರ ಅಂದುಕೊಂಡ.

ಒಬ್ಬರ ಮೇಲೆ ಒಬ್ಬರು ಬಿದ್ದು
ವೋಟಿಗೆ ಸಾಯತಾರೆ.
ಇಬ್ಬರು ನಿಲ್ಲೋ ಸೀಟಿಗೆ ಇಪ್ಪತ್ತು
ಮಂದಿ ನಿಲುತಾರೆ
ವೋಟು ಕೊಡೋಕೆ ಮುಂಚೆ
ಇಲಿಯಂಗೆ ಇರುತಾರೆ
ವೋಟು ಕೊಟ್ಟಾದ ಮೇಲೆ
ಹುಲಿಯಂಗೆ ಆಗುತಾರೆ

ಯಾವಾಗಲೋ ತನ್ನ ಗ್ರಾಮದಲ್ಲಿ ಯಾರೋ ಆಡಿದ ನೆನಪು ಬಂತು. ಬೀರನಿಗೆ ನಗು ಬಂದಿತು. ಪಕಪಕನೆ ನಕ್ಕ.

'ಏ ಆದ್ಯಾಕ್ ಅಂಗೆ ನಗ್ತಾ ಕೂತಿವ್ರಿ. ಬನ್ನಿ ಒಳಕ್ಕೆ. ಹಿಟ್ಟು ಉಣ್ಣೋವ್ರಂತೆ. ರಾಮಿ ಹುಸಿ ಕೋಪಿಸಿಕೊಂಡು ಕರೆದಳು. ಬೀರ ಎದ್ದು ಒಳಕ್ಕೆ ನಡೆದ. ಕೈಕಾಲು ತೊಳೆದ.

'ಓ ಸಿವನೆ ಚಂದಾಗಿ ಮಡಗು'—ಎಂದು ಹೇಳಿ ತಣಿಗೆಯ ಮುಂದೆ ಕೂತ. ಬಿಸಿ ಬಿಸಿ ಮುದ್ದೆ, ಎಸರು ಅವನ ದಿನದ ಆಯಾಸವನ್ನು ಮರೆಸಿತು. ನಿಂಡಾಗಿ ಮುದ್ದೆ ಉಂಡ.

Sri Vidyabharathi Book Centre, Sringeri

CC-O. In Public Domain. Digitized by eGangotri

ತೃಪ್ತಿಯ ತೇಗು ಹಾಕಿ ಈಚಲು ಚಾಪೆಗೆ ತಲೆ ಕೊಟ್ಟ. ರಾಮಿಯೂ ಉಂಡು ದೀಪ ಆರಿಸಿ ಬೀರನ ಮಗ್ಗುಲು ಸೇರಿದಳು.

ಕ್ಕೊ, ಕ್ಕೊ, ಕ್ಕೊ—ಕೋಳಿ ಕೂಗಿತು.

ಕಾ, ಕಾ, ಕಾ—ಕಾಗೆಗಳ ಬಳಗ ಕರೆಯಲು ಆರಂಭಿಸಿತು.

ಬೀರ ನಿದ್ರೆಯಿಂದ ಎದ್ದ. ರಾಮಿ ಅವನಿಗಿಂತ ಬೇಗ ಎದ್ದು ಒಲೆ ಹೊತ್ತಿಸಿದ್ದಳು. ಬೀರ ಕೈಕಾಲು ತೊಳೆದು ದೇವರಿಗೆ ಊದುಗಡ್ಡಿ ಹತ್ತಿಸಿದ. ರಾಮಿ ಕೊಟ್ಟ ಬೆಲ್ಲದ ಟೀ ಕುಡಿದು ಹೊರಟ. ಗುಡಿಸಿಲಿನಿಂದ ಹೊರಬಂದಾಗ ಎದುರು ಮನೆಯ ಸೋಮು ಕಾಣಿಸಿದ. ಸೋಮು ಬೇಲಿಯ ಬಳಿ ಹಲ್ಲು ಉಜ್ಜುತ್ತ ನಿಂತಿದ್ದ. ಬೀರನನ್ನು ಕಂಡ ಅವನು :

'ಬೀರ, ಆಗಲೆ ಕೆಲಸಕ್ಕೆ ಹೊರಟೆಯ'—ಎಂದ.

'ಪೊಟ್ಟೆ ತುಂಬಬೇಕಲ್ಲ. ನೀನು ಯಾವಾಗ ಬಂದೆ'—ಕೇಳಿದ ಬೀರ.

'ನಾನು ನೆನ್ನೆ ರಾತ್ರಿ ಬಂದೆ. ಆಗ ನೀನು ಮಲಗಿದ್ದೆ. ಅದಕ್ಕೆ ಏಳಿಸಲಿಲ್ಲ'—ಎಂದ ಸೋಮು.

'ಹೊಲದ ತಾಕೆ ಬಿಡುವು ಮಾಡ್ಕೊಂಡು ಬಾ'—ಎಂದು ಹೇಳಿ ಬೀರ ಹೊಲಕ್ಕೆ ಹೋದ.

ಬೀರ ಸೋಮು ಒಂದೇ ಕೇರಿಯವರು. ಒಟ್ಟಿಗೇ ಬೆಳೆದವರು. ಗೋಲೀ, ಚಿನ್ನಿದಾಂಡು, ಮರಕೋತಿ, ರಾಮನಜಂಡು —ಹೀಗೆ ಎಲ್ಲ ಆಟಗಳನ್ನೂ ಒಟ್ಟಿಗೇ ಆಡಿದವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೋಮುವಿನ ತಂದೆ ಕಡು ಬಡವ ಆಗಿರಲಿಲ್ಲ. ಹೊಟ್ಟೆ ಬಟ್ಟೆಗೆ ನೇರವಾಗಿತ್ತು. ಸೋಮುವಿನ ತಂದೆಗೆ ಹೆಚ್ಚು ಮಕ್ಕಳೂ ಇರಲಿಲ್ಲ. ಅಲ್ಲದೆ ಸೋಮುವಿನ ತಂದೆಗೆ ತನ್ನ ಮಗನನ್ನು ಓದಿಸಬೇಕು ಎಂಬ ಆಸೆ ಇತ್ತು. ಸೋಮು ತಂದೆಗೆ ತಕ್ಕ ಮಗ. ತಂದೆಯ ಆಸೆಯನ್ನು ನೆರವೇರಿಸಿದ. ಬಿ.ಎ., ಮುಗಿಸಿ ಈಗ ಮುಂದಕ್ಕೆ ಎಂ.ಎ., ಓದುತ್ತಿದ್ದಾನೆ. ರಜ ದಿನಗಳಂದು ಊರಿಗೆ ಬರುತ್ತಾನೆ. ಪಟ್ಟಣ ಸೇರಿದೆ ಎಂದು ಅವನಿಗೆ ಊರಿನ ಮೇಲೆ ಪ್ರೀತಿ ಹೋಗಿಲ್ಲ. ತನ್ನ ಹಿಂದಿನ ಗೆಳೆಯರು, ನೆಂಟರು, ಬೆಳೆದು ಆಡಿದ ಜಾಗ—ಇವುಗಳನ್ನು ಮರೆತಿಲ್ಲ. ಬೀರನಿಗೆ ಅಕ್ಷರ ಬಾರದು ಎಂದು ಅವನ ಸಂಗ ಬಿಟ್ಟಿಲ್ಲ. ಬೀರನ ಕಷ್ಟ-ಸುಖಗಳಲ್ಲಿ ಭಾಗಿ ಆಗುತ್ತಾನೆ. ಆಗಾಗ ಬೀರನಿಗೆ ಒದಗುವ ಸಮಸ್ಯೆಗೆ ಪರಿಹಾರ ಕೊಡುತ್ತಾನೆ.

ಸೋಮು ಬೀರನನ್ನು ಕಾಣಲು ಹೊರಟ. ಆಗ ಏರು ಬಿಡುವ ಸಮಯ. ಸೋಮುವನ್ನು ಕಂಡ ಬೀರ ಕೆಲಸ ನಿಲ್ಲಿಸಿ ಬಂದ. ಹೊಂಗೆ ಮರದ ನೆರಳು ವಿಶಾಲವಾಗಿ ಇತ್ತು. ತಂಪಾಗಿಯೂ ಇತ್ತು. ಅದರ ನೆರಳಿಗೆ ಇಬ್ಬರೂ ಬಂದರು. ಅವನು ಓದುತ್ತಿದ್ದ ಕಾಲೇಜಿನ ವಿಷಯ, ಪಟ್ಟಣದ ಸಮಾಚಾರ, ಊರಿನ ವಿಚಾರ—ಮುಂತಾದವುಗಳ ಬಗ್ಗೆ ಮಾತನಾಡಿದರು.

'ಮುಂದಿನ ವಾರ ಪಂಚಾಯಿತಿ ಎಲೆಕ್ಷನ್ ಇದೆಯಂತೆ' -ಎಂದ ಸೋಮು.

'ಹೌದು, ನಿನ್ನೆ ಜಂಜೆ ಗೌಡರು ಗುಡ್ಲ್ ತಾಕೆ ಬಂದಿದ್ದರು' ಬೀರ ಹೇಳಿದ.

'ಹೋ, ಕ್ಯಾನವಾಸ್ ಮಾಡೋಕೆ ಬಂದಿದ್ರೆ?'

Sri Vidyabharathi Book Centre, Sringeri

CC-O. In Public Domain. Digitized by eGangotri

'ಅಂಗಂದ್ರೆ ಏನು?'

'ನಮಗೇ ಓಟು ಕೊಡಿ ಅಂತ ಪ್ರಚಾರ ಮಾಡೋದು. ಇಂಗ್ಲೀಷಿನಲ್ಲಿ ಇದಕ್ಕೆ ಹಾಗಂತಾರೆ ಅಷ್ಟೆ.'

'ಅಂಗಾ, ಅದಕ್ಕೇ ಬಂದಿದ್ರು.'

'ಯಾತಕ್ಕೆ ಓಟು ಕೊಡಬೇಕು ಅಂತ ಹೇಳಿದ್ರ?'

'ಅಂಗೇನೂ ಏಳಲಿಲ್ಲ. ನಮಗೇ ಓಟು ಕೊಡಿ ಅಂತ ಏಳಿದ್ರು ಅಷ್ಟೆ'.

ಇದು ಪ್ರಚಾರ ಮಾಡೋ ರೀತಿ ಅಲ್ಲ ಬೀರ. ಪಂಚಾಯಿತಿ ಮೆಂಬರಾದರೆ ಏನು ಮಾಡ್ತೀನಿ ಅಂತ ಹೇಳಬೇಕು ಊರಿಗೆ ರಸ್ತೆ ಮಾಡಿಸೋದು, ಕೊಳಚೆ ಪ್ರದೇಶಗಳನ್ನು ತೆಗೆದುಹಾಕೋದು, ಬೀದಿ ದೀಪ ಹಾಕಿಸೋದು, ನಲ್ಲಿ ಹಾಕಿಸೋದು, ಆಸ್ಪತ್ರೆ ಕಟ್ಟಿಸೋದು, ಚರಂಡಿ ಮಾಡ್ಸೋದು —ಹೀಗೆ ಊರಿಗೆ ಬೇಕಾದ ಕೆಲಸ ಮಾಡೋ ಅಂಥವರು ಆಗಿರಬೇಕು. ಇದನ್ನೆಲ್ಲಾ ಮಾಡ ಬಲ್ಲವರು ಪಂಚಾಯಿತಿ ಸದಸ್ಯರು ಆಗಬೇಕು. ಪಂಚಾಯಿತಿ ಸದಸ್ಯ ಆಗೋದೇ ದೊಡ್ಡತನ ಅಲ್ಲ ಬೀರ. ಯೋಗ್ಯತೆ ಇರೋರಿಗೆ ಓಟು ಕೊಡಬೇಕು. ಯೋಗ್ಯರು ಯಾರು ಅಂತ ನೀನು ತಿಳುಕೋಬೇಕು.

'ಯೋಗ್ಯರು ಯಾರು' ಅಂತ ಹೆಂಗೆ ತಿಳಿಯೋದು? ತನ್ನ ಅನುಮಾನವನ್ನು ಮುಂದಿಟ್ಟ ಬೀರ.

'ಸೀಟಿಗೆ ನಿಂತ ಮನುಷ್ಯ ನಿಮ್ಮ ಗ್ರಾಮದವನು ತಾನೆ?' ಸೋಮುವಿನ ಪ್ರಶ್ನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

'ಹೌದು' ಬೀರ ತಲೆ ಆಡಿಸಿದ.

'ಆ ಮನುಷ್ಯ ಯಾರ ಮಗ, ಅವನು ಊರಿನಲ್ಲಿ ಹೇಗೆ ನಡಕೋತಾನೆ. ಅವನ ನಡವಳಿಕೆ ಎಂಥದು? ಒಳ್ಳೆಯವನೋ ಕೆಟ್ಟವನೋ—ಇವೆಲ್ಲ ಗೊತ್ತು ಮಾಡಿಕೋಬೇಕು. ಅದು ಇಲ್ಲದೆ ಯಾರು ಯಾರಿಗೋ ಓಟು ಕೊಡಬಾರದು.'

'ಸರಿ ಸೋಮು, ಎಲೆಕ್ಷನ್ ಮೊನ್ನೆ ಮೊನ್ನೆ ಆದಂತೆ ಅದೆ. ಎಷ್ಟು ದಪ ಎಲೆಕ್ಷನ್ ನಡಿಯೋದು?'

'ನೋಡು, ಆರೇಳು ತಿಂಗಳ ಹಿಂದೆ ನಡೆದದ್ದು ವಿಧಾನ ಸಭೆ ಚುನಾವಣೆ. ಇದು ರಾಜ್ಯಗಳಿಗಾಗಿ ನಡೆಯುವ ಚುನಾವಣೆ. ಆ ಮೇಲೆ ನಡೆದದ್ದು ಲೋಕಸಭೆ ಚುನಾವಣೆ. ದಿಲ್ಲಿಯ ಸರಕಾರ ಅಂತ ಕೇಳಿರಬೇಕಲ್ಲ. ಅದಕ್ಕೆ ನಡೆಯುವ ಚುನಾವಣೆಯೇ ಲೋಕಸಭೆಯದು. ನಂತರ ನಡೆದದ್ದು ತಾಲ್ಲೂಕು ಬೋರ್ಡ್ ಚುನಾವಣೆ. ಈಗ ನಡೀತಾ ಇರೋದು ಪಂಚಾಯಿತಿ ಚುನಾವಣೆ. ಐದು ವರುಷಗಳಿಗೆ ಒಮ್ಮೆ ಈ ಚುನಾವಣೆಗಳು ನಡೆಯುವುವು?'

'ಹಿಂಗೆ ಚುನಾವಣೆ ನಡೀತಾನೇ ಇರ್ತವೆ. ಇದರಿಂದ ಯಾರಿಗೆ ಲಾಭ? ರಾಮಂಗೆ ರಾಜ್ಯ ಬಂದರೂ ರಾಗಿ ಬೀಸೋದು ತಪ್ಪಲಿಲ್ಲ'—ಎಂದ ಬೀರ.

'ಹಾಗೆ ಅನ್ನಬಾರದು. ನಮ್ಮ ದೇಶ ಪ್ರಜಾಪ್ರಭುತ್ವದ್ದು. ಅಂದರೆ ಇಲ್ಲಿ ಪ್ರಜೆಗಳದೇ ರಾಜ್ಯ. ಪ್ರಜೆಗಳೂ ಅವರೇ. ಒಡೆಯರೂ ಅವರೇ'—ಎಂದ ಸೋಮು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸೋಮುವಿನ ಮಾತು ಕೇಳಿ ಬೀರನಿಗೆ ನಗು ಬಂತು.

'ಪ್ರಜೆಗಳೇ ಒಡೇರು, ಅದು ಹೆಂಗೆ?'–ಎಂದ.

'ನೋಡು ಬೀರ, ಪ್ರಜೆಗಳು ತಾವಾಗಿ ಸರಕಾರ ಆಳಲು ಸಾಧ್ಯವಿಲ್ಲ. ಆದರೆ ಸರಕಾರದಲ್ಲಿ ಇರುವವರು ಯಾರು? ನಾವು ಓಟು ಕೊಟ್ಟು ಗೆಲ್ಲಿಸಿದ ಜನ. ಅವರು ನಮ್ಮ ಪರವಾಗಿ ಸರಕಾರ ರಚಿಸುತ್ತಾರೆ. ಆಳುತ್ತಾರೆ. ಪಂಚಾಯಿತಿಯನ್ನೇ ನೋಡು. ನೇರವಾಗಿ ನೀನು ಕೆಲಸ ಮಾಡಲು ಸಾಧ್ಯ ಆಗದಿರಬಹುದು. ಆದರೆ ನೀನು ಓಟುಕೊಟ್ಟು ಯಾರನ್ನು ಗೆಲ್ಲಿಸುವೆಯೋ ಅವರೇ ಮೆಂಬರು ಆಗುವರು. ಅವರು ನಿನ್ನ ಪರವಾಗಿ ಅಂದರೆ ಮತದಾರನ ಪರವಾಗಿ ಕೆಲಸ ಮಾಡುವರು. ಇದನ್ನೇ ಪ್ರಜಾಪ್ರಭುತ್ವ ಅನ್ನುವುದು.'

ಸೋಮು, ಅಂಗಾದರೆ ಯಾರು ಬೇಕಾದರೂ ಓಟಿಗೆ ನಿಲ್ಲಬೋದಾ?'

'ಓಹೋ, ಯಾರು ಬೇಕಾದರೂ ನಿಲ್ಲಬಹುದು. ಆದರೆ ಕೆಲವು ನಿಯಮಗಳು ಇವೆ.'

'ಎಂಥಾ ನಿಯಮಗಳು ಅವು?'–ಬೀರ ಕೇಳಿದ.

'ನಮ್ಮ ದೇಶ ಸ್ವತಂತ್ರ ಆದುದು ಗೊತ್ತು ತಾನೆ? ಆಗ ನಮ್ಮ ಸರಕಾರ ರಚನೆ ಆಯಿತು. ನಮ್ಮ ದೇಶದಲ್ಲಿ ನಮ್ಮ ರಾಜ್ಯದಂತೆ ೨೨ ರಾಜ್ಯಗಳಿವೆ. ಈ ರಾಜ್ಯಗಳಿಗೆ ಅವುಗಳದೇ ಆದ ಸರಕಾರವಿದೆ. ಇದಕ್ಕೆ ರಾಜ್ಯ ಸರಕಾರ ಎಂದು ಕರೆಯುತ್ತಾರೆ. ಇವುಗಳನ್ನೆಲ್ಲಾ ನೋಡಿಕೊಳ್ಳಲು ದಿಲ್ಲಿಯಲ್ಲಿ ಒಂದು ಸರಕಾರ ಇದೆ. ಇದಕ್ಕೆ ಕೇಂದ್ರ ಸರಕಾರ ಎಂದು ಕರೆಯುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜ್ಯ ಸರಕಾರಗಳಿಗೂ ಕೇಂದ್ರ ಸರಕಾರಗಳಿಗೂ ಇರುವ ಸಂಬಂಧ ಏನು? ಪ್ರಜೆಗಳಿಗೆ ಇರುವ ಹಕ್ಕು ಮತ್ತು ಕರ್ತವ್ಯಗಳು ಯಾವುವು? ನ್ಯಾಯಾಲಯಗಳ ಕೆಲಸವೇನು? ಮುಂತಾದ ಅನೇಕ ವಿಷಯಗಳನ್ನು ತಿಳಿಸಿದೆ ಸಂವಿಧಾನದಲ್ಲಿ. ಬೀರ ಸಂವಿಧಾನದ ಬಗ್ಗೆ ಈಗ ಹೆಚ್ಚು ಚರ್ಚೆ ಬೇಡ. ವಿಷಯಕ್ಕೆ ಬರೋಣ. ನಾನು ನಿಯಮದ ಬಗ್ಗೆ ಹೇಳುತ್ತೀನಿ.'

ಬೀರನಿಗೆ ಕುತೂಹಲ ಹೆಚ್ಚುತ್ತ ಹೋಯಿತು. ಸೋಮು ಹೇಳುವುದನ್ನು ಕೇಳುತ್ತ ಕುಳಿತ.

'ಹುಚ್ಚರು, ದಿವಾಳಿಗಳು ಓಟು ಮಾಡುವ ಹಕ್ಕಿಲ್ಲ. ಹಾಗೆಯೇ ನಿಲ್ಲುವ ಹಾಗಿಲ್ಲ. ಹಕ್ಕೂ ಇಲ್ಲ.'

'ದಿವಾಳಿ ಎಂದರೆ ಯಾರು?'–ಬೀರ ಕೇಳಿದ.

'ನ್ಯಾಯಾಲಯದಲ್ಲಿ ಇದರ ತೀರ್ಮಾನ ಆಗುವುದು. ಒಂದು ಪೈಸೆಗೂ ಗತಿ ಇಲ್ಲದವರು ದಿವಾಳಿಗಳು. ನ್ಯಾಯಾಲಯ ಅದನ್ನು ತೀರ್ಮಾನಿಸುತ್ತದೆ. ಪಾಪರ್‌ಚೀಟಿ ಅಂತ ಕೇಳಿಲ್ವ ಅದೇ. ಇದಲ್ಲದೆ ನ್ಯಾಯಾಲಯದಲ್ಲಿ ಶಿಕ್ಷೆಗೆ ಒಳಗಾದವರಿಗೂ ಸಹ ಓಟು ಕೊಡುವ ಅಥವಾ ಓಟಿಗೆ ನಿಲ್ಲುವ ಹಕ್ಕಿಲ್ಲ'.

'ಸೋಮು, ನಿನ್ತಾವ ತುಂಬ ಇಸೆಯ ತಿಳಿದಂಗಾತು. ನಡಿ ಈಗ ಮನೆಗೋಗವ' ಎಂದ ಬೀರ. ಬೀರ ಸೋಮು ಮನೆಯ ಕಡೆ ಹೊರಟರು. ಹಾದಿ ಸಾಗುತ್ತಿತ್ತು. ಬೀರ ಸುಮ್ಮನೆ ಇರಲಿಲ್ಲ. ಸೋಮು ಓದಿಕೊಂಡು ವಿಷಯ ತಿಳಿದವನು ಎಂದು ಅವನಿಗೆ ಗೊತ್ತು. ಅದಕ್ಕಾಗಿ ಪ್ರಶ್ನೆ ಕೇಳಲು ಆರಂಭಿಸಿದ.

'ಸೋಮು, ಅಂದಂಗೆ ಓಟು ಮಾಡಾಕೆ ಏಟು ವರ್ಷ ಆಗಿರಬೇಕು?'

Sri Vidyabharathi Book Centre, Sringeri

CC-O. In Public Domain. Digitized by eGangotri

'ಪರವಾಗಿಲ್ಲ ಬೀರ ಅಂತೂ ನೀನು ಪ್ರಶ್ನೆ ಕೇಳುವ ಹಾಗಾದೆಯಲ್ಲ. ೨೧ ವರ್ಷ ತುಂಬಿದ ಭಾರತೀಯ ಪುರುಷರು, ಮಹಿಳೆಯರು ಮತದಾನ ಮಾಡಬಹುದು.'

'ಭಾರತೀಯ, ಅಂದರೆ?....'

'ನಮ್ಮ ದೇಶ ಭಾರತ ತಾನೆ? ಈ ದೇಶದಲ್ಲಿ ಹುಟ್ಟಿ ಬೆಳೆದವರೇ ಭಾರತೀಯರು. ಬೇರೆ ದೇಶದವರು ಇಲ್ಲಿ ಮತದಾನ ಮಾಡುವ ಹಾಗಿಲ್ಲ. ಬೇರೆ ದೇಶದವರು ನಿಗದಿಯಾದ ಕಾಲ ನಮ್ಮಲ್ಲಿ ಇರಬೇಕು. ಅಂಥವರು ನಮ್ಮ ದೇಶದ ನಾಗರೀಕರಾಗಲು ಬಯಸಬೇಕು. ಆಗ ಸರಕಾರ ಅವರಿಗೆ ಅನುಮತಿ ಕೊಡುವುದು. ನಂತರ ಅವರಿಗೆ ಮತ ನೀಡುವ ಅವಕಾಶ ಸಿಗುವುದು.'

'ಸರಿ ಸೋಮು, ಎಲೆಕ್ಷನ್‌ಗೆ ಐಟು ಜನ ಬೇಕಾದರೂ ನಿಲ್ಲಬಹುದ?' ಬೀರನ ಮರು ಪ್ರಶ್ನೆ.

'ಹಾಗೆ ಆಗುವುದಿಲ್ಲ ಬೀರ. ಜನಸಂಖ್ಯೆಗೆ ಅನುಗುಣವಾಗಿ ಸದಸ್ಯರ ಸಂಖ್ಯೆ ಇರುತ್ತದೆ. ನಮ್ಮ ಕರ್ನಾಟಕ ರಾಜ್ಯದ ವಿಧಾನಸಭೆ ಸದಸ್ಯರ ಸಂಖ್ಯೆ ೨೨೪. ಲೋಕಸಭೆ ಸದಸ್ಯರ ಸಂಖ್ಯೆ ೫೪೨. ಇವು ಜನಸಂಖ್ಯೆ ಹೆಚ್ಚಾದಂತೆಲ್ಲ ಬದಲಾಗುತ್ತ ಹೋಗುತ್ತದೆ. ತಾಲ್ಲೂಕು ಬೋರ್ಡ್, ಪಂಚಾಯಿತಿಗಳಿಗೂ ಹೀಗೆಯೆ. ನಮ್ಮ ಪಂಚಾಯತಿ ಸದಸ್ಯರ ಸಂಖ್ಯೆ ೯. ಕೆಲವು ಪಂಚಾಯತಿಗಳಲ್ಲಿ ೧೫ ಸದಸ್ಯರೂ ಇರಬಹುದು. ಮಹಿಳೆಯರು ಮತ್ತು ಹರಿಜನರಿಗೆ ವಿಶೇಷ ಸ್ಥಾನಗಳಿವೆ. ಈಗ ನಮ್ಮ ಕ್ಷೇತ್ರದಿಂದ ಒಂದು ವಿಧಾನಸಭೆ ಸ್ಥಾನವಿದೆ. ಅಲ್ಲವೆ? ಆ ಒಂದು ಸ್ಥಾನಕ್ಕೆ ಎಷ್ಟು ಜನ ಬೇಕಾದರೂ ನಿಲ್ಲಬಹುದು. ಆದರೆ ನೀನು ಆರಿಸುವುದು ಒಬ್ಬನನ್ನೆ.'

Sri Vidyabharathi Book Centre, Sringeri

 CC-O. In Public Domain. Digitized by eGangotri

'ಸೋಮು ನಮಗೇ ಓಟು ಕೊಡಿ ಅಂತ ಎಲ್ಲರೂ ಕೇಳ್ತಾರೆ. ಓಟು ಕೊಡದೇ ಇದ್ರೆ ನಿಸ್ಪೂರ ಕಟ್ಕೋ ಬೇಕಾಯ್ತದೆ. ಅದ್ಕೆ ಓಟು ಕೊಡೋದೆ ಬ್ಯಾಡ ಅಂತೀನಿ. ನೀನೇನು ಅಂತಿ' ಎಂದ ಬೀರ.

ಸೋಮು ಬೀರನ ಮಾತು ಕೇಳಿ ನಗಲು ಆರಂಭಿಸಿದ.

'ಯಾಕೆ ನಗ್ತೀ'—ಎಂದ ಬೀರ.

'ಓಟು ಕೊಡೋದು ನಿನ್ನ ಹಕ್ಕು. ನೀನು ಯಾರಿಗೆ ಬೇಕಾದರೂ ಓಟು ಕೊಡಬಹುದು. ಓಟೇ ಕೊಡುವುದಿಲ್ಲ ಎಂದರೆ ನಿನ್ನ ಹಕ್ಕನ್ನು ನೀನೇ ಕಳೆದುಕೊಂಡಂತೆ ನಿನಗೆ ಬೇಡದವರು ಆರಿಸಿ ಬಂದಾಗ ಕೈಹಿಸುಕಿದರೆ ಪುನಃ ಅದಕ್ಕಾಗಿ ಐದು ವರುಷಗಳು ಕಾಯಬೇಕಲ್ಲ. ಮತದಾನ ಮಾಡುವುದು ಜಾಣರ ಲಕ್ಷಣ.'

'ಅಲ್ಲ ಕಣ ಸೋಮು, ನಮಗೆ ಬೇಕಾದವರು ಮೂರು ಜನ ನಿಂತಿಪ್ಪುಪ್ಪ ಆಗ ಅವರ ಹತ್ತಿರ ನಿಸ್ಪೂರ ಮಾಡಿ ಕೊಳ್ಳೋಕೆ ಆಯ್ತದ?'

'ಇಲ್ಲ ಬೀರ, ಇವರಲ್ಲಿಯೇ ನಿನಗೆ ತುಂಬ ಬೇಕಾದವನನ್ನು ಆರಿಸಬೇಕು. ಮೂವರಿಗೂ ನೀನು ಮತ ಹಾಕಿದರೆ ಅದು ಕುಲಗೆಡುತ್ತದೆ.'

'ಕುಲಗೆಡುವುದು ಅಂದರೆ?....'

'ಹೀಗೆ ಮಾಡಿದ ಮತಗಳನ್ನು ಎಣಿಕೆಗೆ ತೆಗೆದುಕೊಳ್ಳುವುದಿಲ್ಲ. ನಿನ್ನ ಮತ ಯಾರಿಗೂ ಸೇರುವುದಿಲ್ಲ. ಇಂತಹ ಮತಗಳನ್ನು ಕುಲಗೆಟ್ಟ ಮತಗಳು ಎಂದು ಕರೆಯುವರು.

Sri Vidyabharathi Book Centre, Sringeri

CC-O. In Public Domain. Digitized by eGangotri

'ಸರಿ ಕಣಪ್ಪ. ಮುಂದೆ ಸರಿಯಾಗಿ ಮತ ಆಕ್ತೀನಿ. ಅದು ಸರಿ, ನಾನು ಯಾರಿಗೆ ಓಟು ಹಾಕಿದೆ ಅಂತ ಯಾರಿಗೂ ಗೊತ್ತಾಗೋಲ್ಲವ?.'

'ಇಲ್ಲ ಬೀರ, ನೀನು ಯಾರ ಹೆಸರಿಗೆ ಮತ ಹಾಕುವೆಯೋ ಅದರ ಮುಂದೆ ಗುರುತು ಇರುತ್ತದೆ. ಹೂವು, ಆನೆ, ಒಂಟೆ ಹೀಗೆ. ಆ ಗುರುತಿನ ಮೇಲೆ ನೀನು ಮುದ್ರೆ ಒತ್ತಬೇಕು. ಮುದ್ರೆ ಒತ್ತಿದವರು ಯಾರು ಎಂಬುದು ಗೊತ್ತು ಆಗುವುದಿಲ್ಲ. ಏಕೆಂದರೆ ನಿನ್ನ ಹೆಸರು ಮತ ಚೀಟಿಯಲ್ಲಿ ಇರುವುದಿಲ್ಲ. ಇಂತಹ ಮತದಾನಕ್ಕೆ 'ರಹಸ್ಯ ಮತದಾನ' ಎಂದು ಕರೆಯುವರು.'

'ಓಟು ಮಾಡೋ ಜಾಗದ ಮುಂದೆ ಒಂದು ಕೆಂಪು ಬಾವುಟ ಇರ್ತದಲ್ಲ. ಅದು ಯಾಕೆ'–ಬೀರನ ಮರು ಪ್ರಶ್ನೆ.

'ಮತಗಟ್ಟೆಯಿಂದ ೧೦೦ ಮೀಟರ್ ದೂರದಲ್ಲಿ ಕೆಂಪು ಬಾವುಟ ನೆಟ್ಟಿರುತ್ತಾರೆ. ಮತ ಹಾಕದವರು ಅಲ್ಲದೆ ಬೇರೆಯವರು ಅಲ್ಲಿ ಹೋಗಬಾರದು. ಏನಾದರೂ ಗುಂಪು ಘರ್ಷಣೆಗಳು ಆಗಬಹುದು ಎಂಬುದೇ ಇದರ ಉದ್ದೇಶ. ಈ ಜಾಗಕ್ಕೆ ಸುರಕ್ಷಿತ ಪ್ರದೇಶ ಎಂದು ಕರೆಯುವರು.'

'ಓಟಿಗೆ ನಿಂತ ಉಮೇದುವಾರರು ಕಳುಹಿಸುವ ವಾಹನಗಳಲ್ಲಿ ಹೋಗಬಾರದು. ಯಾಕೆ ಅಂತ ನಿನಗೆ ಗೊತ್ತ?'— ಸೋಮು ಬೀರನನ್ನು ಕೇಳಿದ.

'ಇಲ್ಲ'–ಎಂದು ಬೀರ ತಲೆ ಆಡಿಸಿದ.

'ಲಾರಿ, ಕಾರು, ಗಾಡಿ ಹೀಗೆ ಅನೇಕ ವಾಹನಗಳನ್ನು ಕಳುಹಿಸಬಹುದು. ನೀವು ಅಂತಹವರ ವಾಹನಗಳಲ್ಲಿ ಹೋಗಬಾರದು. ಹೋದರೆ ಅವರಿಗೇ ಓಟು ಕೊಡಬೇಕೆಂಬ

Sri Vidyabharathi Book Centre, Sringeri

 CC-O. In Public Domain. Digitized by eGangotri

ದಾಕ್ಷಿಣ್ಯಕ್ಕೆ ಮನಸ್ಸು ಒಳಗು ಆಗಬೇಕು. ಅದರಿಂದಲೇ ಸರಕಾರ ಮತಗಟ್ಟೆಗಳನ್ನು ಸಮೀಪದಲ್ಲಿಯೇ ಇಟ್ಟಿರುತ್ತದೆ'

'ಸೋಮು, ಬೂತ ಅಂತಾರಲ್ಲ ಅದೇನು?-ಬೀರ ಕೇಳಿದ.

'ಬೂತ ಅಲ್ಲ ಅದು. ಇಂಗ್ಲೀಷಿನ ಬೂತ್' ಎಂಬ ಪದ ಬೂತ ಆಗಿದೆ. 'ಬೂತ್' ಎಂದರೆ ಮತಗಟ್ಟೆ. ಮತದಾನ ಮಾಡುವ ಸ್ಥಳ. ಕೆಲವರು ಮತದಾನದ ಪೆಟ್ಟಿಗೆಯನ್ನೇ ಬೂತ ಎಂದು ಕರೆಯುವರು. ಇದು ಸರಿಯಲ್ಲ'.

ಅಧಿಕಾರಿಗಳ ಸಮ್ಮುಖದಲ್ಲಿ ಮತದಾನ ಕಾಣಬಹುದು.
ಸರತಿಯ ಸಾಲನ್ನೂ ಕಾಣಬಹುದು.

'ಸರಿಯಪ್ಪ. ಕೆಲವರು ಓಟು ಆಕಾಕೆ ಹೋದಾಗ ಹೆಸರೇ ಇರಾಕಿಲ್ಲ.'

'ಬೀರ, ಮತದಾರರು ಯಾರು ಯಾರು ಅಂತ ಪಟ್ಟಿ ಮಾಡುತ್ತಾರೆ. ಇದಕ್ಕೆ ಮತದಾರರ ಪಟ್ಟಿ ಎಂದೇ ಹೆಸರು. ಮತದಾರರ ಹೆಸರನ್ನು ಬರೆಯಲು ನಿಮ್ಮ ಮನೆಯ ಮುಂದೆಯೇ ಬರುವರು. ಅವರಿಗೆ ಗಣತಿದಾರರು ಎಂದು ಕರೆಯುವರು. ಅವರು ಬಂದಾಗ ಸಹಕಾರ ಕೊಡಬೇಕು. ೨೧ ವರುಷ ತುಂಬಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಂಡಸರ, ಹೆಂಗಸರ ಹೆಸರನ್ನು ಬರೆಸಬೇಕು. ವಯಸ್ಸನ್ನೂ ಸರಿಯಾಗಿ ಹೇಳಬೇಕು. ಗಣತಿದಾರರು ಬಂದಾಗ ಮನೆಯಲ್ಲಿ ನಾವು ಇಲ್ಲದೆ ಹೆಸರು ಬಿಟ್ಟು ಹೋಗಬಹುದು. ಆಗ ನಾವೇ ಅವರನ್ನು ಕಾಣಬೇಕು. ಬಿಟ್ಟುಹೋದ ಹೆಸರನ್ನು ಸೇರಿಸಬೇಕು. ಗಣತಿದಾರರು ಪಟ್ಟಿಮಾಡಿದ ಮೇಲೆ ಅದನ್ನು ತಾಲ್ಲೂಕು ಆಫೀಸಿನಲ್ಲಿ ಇಡುತ್ತಾರೆ. ಪಂಚಾಯತಿ ಆಫೀಸಿನಲ್ಲಿ ಇಡುತ್ತಾರೆ. ಬಿಟ್ಟು ಹೋದ ಹೆಸರನ್ನು ಸೇರಿಸಲು ಮತ್ತೆ ಅವಕಾಶ ಕೊಡುವರು. ಇಷ್ಟು ಆಗಿಯೂ ಹೆಸರು ಸೇರಿಸದಿದ್ದರೆ ಯಾರ ತಪ್ಪು ?'.

'ಸರಿ, ಸರಿ. ನೀನು ಏಳೋದು ನಿಜ'–ಎಂದು ಬೀರ ತಲೆ ತೂಗಿದ.

'ಓಟು ಆಕೋಕೆ ಹೋದಾಗ ಬೆರಳಿನ ಮೇಲೆ ಮಸಿ ಆಕುವರು. ಇದು ಯಾಕೆ?'–ಬೀರ ಸೋಮುವನ್ನು ಕೇಳಿದ.

'ನೋಡು ಬೀರ, ಒಂದೇಸಾರಿ ಮಾತ್ರ ಮತ ಹಾಕಬೇಕು. ಎರಡು ಮತ ಹಾಕದೆ ಇರಲಿ ಎಂದು ಕಪ್ಪು ಮಸಿ ಹಾಕುತ್ತಾರೆ. ಇದು ಬೇಗ ಅಳಿಸುವುದಿಲ್ಲ. ಕೆಲವು ದಿನಗಳ ತನಕ ಇರುತ್ತದೆ.'

'ಸೋಮು, ಮತ ಆಕಿದ ಮೇಲೆ ಯಾರು ಗೆದ್ದರು ಅಂತ ಹೆಂಗೆ ಗೊತ್ತಾಗುವುದು?'.

'ಬಹಳ ಮುಖ್ಯವಾದ ಪ್ರಶ್ನೆ ಬೀರ. ಎಲ್ಲರೂ ಮತ ಹಾಕುವುದಕ್ಕೆ ಒಂದು ನಿಗದಿಯಾದ ವೇಳೆ ಇದೆ. ಇದಾದನಂತರ ಮತಗಟ್ಟೆ ಅಧಿಕಾರಿಗಳು ಪೆಟ್ಟಿಗೆಯನ್ನು ಮುಚ್ಚಿ ಅದಕ್ಕೆ ಮುದ್ರೆ ಹಾಕುವರು. ನಂತರ ಅದನ್ನು ಜೋಪಾನವಾಗಿ ತಾಲ್ಲೂಕು ಕಛೇರಿಗೆ ತರುವರು. ಅಲ್ಲಿಂದ ಪೆಟ್ಟಿಗೆ ಎಣಿಕೆ

Sri Vidyabharathi Book Centre, Sringeri

 CC-O. In Public Domain. Digitized by eGangotri

ಕೇಂದ್ರಕ್ಕೆ ಹೋಗುವುದು. ಅಲ್ಲಿ ಉಮೇದುವಾರರ ಅಥವಾ ಅವರ ಕಡೆಯವರ ಎದುರಿನಲ್ಲಿ ಪೆಟ್ಟಿಗೆಗೆ ಸರಿಯಾಗಿ ಮುದ್ರೆ ಆಗಿದೆಯೆ ಇಲ್ಲವೆ ಎಂದು ಪರೀಕ್ಷಿಸುವರು. ಪೆಟ್ಟಿಗೆಯಿಂದ ಮತ ಗಳನ್ನು ಹೊರಕ್ಕೆ ಸುರಿಯುವರು. ಈ ಮತಗಳಲ್ಲಿ ಕುಲಗೆಟ್ಟ ಮತಗಳನ್ನು ಬೇರೆ ಮಾಡುವರು. ಉಳಿದ ಮತಗಳನ್ನು ಒಂದೆಡೆ

ಮತ ಎಣಿಕೆ ಮಾಡುತ್ತಿರುವುದು.

ಸೇರಿಸಿ ನಂತರ ಎಣಿಕೆ ಮಾಡುವರು. ಇಂತಹ ಅನೇಕ ಪೆಟ್ಟಿಗೆ ಗಳು ಇರುತ್ತವೆ. ಎಲ್ಲ ಪೆಟ್ಟಿಗೆಗಳಿಂದಲೂ ಮತಗಳು ಎಣಿಕೆ ಆಗುವುವು. ಹೆಚ್ಚು ಮತಗಳನ್ನು ಯಾರು ಪಡೆಯುವರೋ ಅವರನ್ನು ಗೆದ್ದವರೆಂದು ಘೋಷಿಸುವರು.'

'ಸೋಮು, ನೀನು ನಂಗೆ ತುಂಬಾ ತಿಳುವಳಿಕೆ ಕೊಟ್ಟೆ. ಓ ಗುಡ್ಲು ಬಂದೇ ಬಿಡ್ತು. ಬಾ ಹೋಗೋವ'–ಬೀರ ಕರೆದ.

'ಆ ಮೇಲೆ ಬರುತ್ತೇನೆ. ನಾನು ಹೇಳಿದ್ದನ್ನು ಮನಸ್ಸಿನಾಗೆ ಇಟ್ಕೊ. ತಿಳಿಯದೆ ಇರುವ ನಾಲ್ಕು ಜನರಿಗೆ ಹೇಳು,' ಎಂದು ಹೇಳಿ ಸೋಮು ಅವನ ಮನೆ ಕಡೆ ಹೊರಟ. ಬೀರನೂ ತನ್ನ ಗುಡಿಸಲ ಕಡೆ ಹೊರಟ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri



ಬೆಲೆ : ರೂ. ೧-೫೦

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ, ಮೈಸೂರು
ಪ್ರತಿಗಳು ೧೦,೦೦೦–೧೯೭೪

Sri Vidyabharathi Book Centre, Sringeri